ಬೇಸಿಗೆಯಲ್ಲಿ ನೀರಿನ ಕೊರತೆ ಆಗಿರಲಿಲ್ಲ.

'ಈ ಮದಗದ ಹೂಳನ್ನು ಹನ್ನೆರಡು ವರ್ಷದಿಂದೀಚೆಗೆ ಬೇರೆಬೇರೆ ಯೋಜನೆಯನ್ವಯ ಮೂರು ಬಾರಿ ಎತ್ತಿದ್ದಾರಂತೆ. ಎರಡು ಕಡೆ ನೀರನ್ನು ಹೊರಬಿಡಲು ಗೇಟ್‌ವಾಲ್ವ್ ಇದೆ. ಐದು ವರ್ಷಗಳಿಂದ ಪಂಚಾಯತ್ ಗೇಟ್‌ವಾಲ್ವಿನ ನಿರ್ವಹಣೆ ಮಾಡುತ್ತಿರುವ ಕಾರಣ ಹಿಂದಿನಂತೆ ನೀರು ಪೋಲಾಗದೆ ಕೊನೆವರೆಗೂ ಉಳಿಯುತ್ತಿದೆ' ಎನ್ನುತ್ತಾರೆ ಚಾಂತಾರು ಪಂಚಾಯತ್ ಉಪಾಧ್ಯಕ್ಷ ದಿನೇಶ್.

ಹಿಂದೆ ಇಲ್ಲಿಂದ ಆರು ಕಿ.ಮೀ. ದೂರದ ಬಾರ್ಕೂರು ರಸ್ತೆಯವರೆಗೂ ನೀರು ಹರಿಯುತ್ತಿತ್ತಂತೆ. ಮೂವತ್ತೈದು ವರ್ಷದ ಹಿಂದಿನವರೆಗೂ ಈ ಮದಗದ ನೀರಿನಿಂದ ಮೂರನೆಯ ಬೆಳೆ, ಅದರೆ, ಬೇಸಿಗೆಯಲ್ಲಿ ಕೊಳಕ್ಕೆ ಬೆಳೆಯನ್ನೂ ಮಾಡುತ್ತಿದ್ದರು. ಇಲ್ಲಿಂದ ನೀರು ಹೊರಹರಿದು ಹೋಗುತ್ತಿದ್ದು ಅಲ್ಲಲ್ಲಿ ಕಟ್ಟು ಹಾಕಿ ಭತ್ತದ ಗದ್ದೆಗೆ ಹರಿಸುತ್ತಿದ್ದರು. 'ಈಗ ಅದೆಲ್ಲಾ ಇಲ್ಲದಾಗಿದೆ. ಹತ್ತಿರದ ಪ್ರದೇಶದಲ್ಲಿ ಬೆರಳೆಣಿಕೆಯವರು ಎರಡನೇ ಬೆಳೆ ಮಾಡುತ್ತಿದ್ದಾರೆ' ಎನ್ನುವುದು ಕೃಷಿಕ ಪ್ರಶಾಂತ್ ಅವರ ಮಾಹಿತಿ.

ನಿವೃತ್ತ ಪ್ರಾಂಶುಪಾಲ ಡಾ. ಜಗದೀಶ್ ಶೆಟ್ಟಿ ಅವರ ಪ್ರಕಾರ, '1455ರ ತಾಮ್ರ ಶಾಸನದಲ್ಲಿ ಚಾಂತಾರು ಮದಗದ ನೀರಿನ ಹಂಚಿಕೆಯ ಬಗ್ಗೆ ಉಲ್ಲೇಖವಿದೆ'. ಈ ಮದಗ ಅದಕ್ಕೂ ಪೂರ್ವಕಾಲದ್ದೆಂದು ಊಹಿಸಬಹುದು. 'ಬಾರ್ಕೂರಿನ ಮೂಡುಕೇರಿ ಸೋಮನಾಥ ದೇವಾಲಯದ ಸಂಗ್ರಹದಲ್ಲಿ ಈ ತಾಮ್ರಶಾಸನ ಭದ್ರವಾಗಿದೆ' ಎನ್ನುತ್ತಾರೆ ಅದನ್ನು ಅಧ್ಯಯನ ಮಾಡಿದ ಬ್ರಹ್ಮಾವರದ ಕ್ರಾಸ್‌ಲ್ಯಾಂಡ್ ಕಾಲೇಜಿನ ಪ್ರಾಧ್ಯಾಪಕ ಕೆ.ಕೆ. ಗುರುಮೂರ್ತಿ.

1873ರ ಕರ್ನಾಟಕ ಗಝೆಟಿಯರಿನಲ್ಲಿ ಆಗಿನ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಆರು ಮದಗಗಳ ಉಲ್ಲೇಖವಿದೆಯಂತೆ. ನೂರಕ್ಕೂ ಹೆಚ್ಚು ಎಕರೆ ಭತ್ತದ ಗದ್ದೆಗಳಿಗೆ ನೀರುಣಿಸುತ್ತಿದ್ದ ಇವುಗಳೆಂದರೆ, ಚಾಂತಾರು (ಉಡುಪಿ ತಾಲೂಕು), ನಾರ್ನಾಡು ( ಉಪ್ಪೂರು ಗ್ರಾಮ), ಕೋಟೆಕೆರೆ (ಹೊಸಂಗಡಿ ಗ್ರಾಮ), ದಾಲಂತ್ರಿಯ (ಎಲ್ಲೂರು ಗ್ರಾಮ) ಮತ್ತು ಕಾವೂರು ಮದಗ. ಕೊನೆಯದು ಮಂಗಳೂರಿನ ಹೊರವಲಯದ ಕಾವೂರು ಗ್ರಾಮದಲ್ಲಿದೆ.

ಈಗ ಇರುವ ಸ್ಥಿತಿಯಲ್ಲಿ ಚಾಂತಾರು ಮದಗ ಜಿಲ್ಲೆಯ ಅತಿ ದೊಡ್ಡದಲ್ಲ. ಮಣ್ಣಪಳ್ಳದ ನಂತರವೇ ಅದರ ಸ್ಥಾನ ಬರುತ್ತದೆ. ಆದರೆ ಹಲವೆಡೆ ಚಾಂತಾರು ಮದಗವನ್ನು ಜಿಲ್ಲೆಯ ಅತಿ ದೊಡ್ಡ ಜಲಾಶಯ ಎಂದೇ ಹೇಳುತ್ತಾರೆ. ಇದೇಕೆ ಹೀಗೆ?



ಪ್ರಕಾಶ್ ಶೆಟ್ಟಿ



ಕರುಣಾಕರ ಶೆಟ್ಟಿ

## ಟ್ಯಾಂಕರ್ ನೀರಿಗೆ 8 ಕೋಟಿ ವೆಚ್ಚ!

ಕಳೆದ ಸಾಲಿನಲ್ಲಿ ಉಡುಪಿ ಜಿಲ್ಲೆ ಅಭೂತಪೂರ್ವ ಬರಕ್ಕೆ ತುತ್ತಾಗಿತ್ತು. ಆಗ ಟ್ಯಾಂಕರ್ ನೀರು ಪೂರೈಕೆಗಾಗಿ ಜಿಲ್ಲಾಡಳಿತ ಮಾಡಿದ ವೆಚ್ಚ 8 ಕೋಟಿ ರೂಪಾಯಿ. ಯಡ್ತಾಡಿಯಂತಹ ಹಳ್ಳಿ ಪಂಚಾಯತಿಯೂ ಕೂಡಾ 10 ಲಕ್ಷ ವೆಚ್ಚ ಮಾಡಿತ್ತಂತೆ. ಮುಂಜಾಗರೂಕತಾ ಕ್ರಮವಾಗಿ ಇದರಲ್ಲಿ ಹತ್ತರಲ್ಲೊಂದು ಭಾಗವನ್ನಾದರೂ ಮದಗಗಳಂತಹ ಪಾರಂಜವ್ಯಗಳಿಗೆ ಹಂತಹಂತವಾಗಿ ಮರುಜೀವ ಕೊಡಲು ಬಳಸಬಹುದಾಗಿತ್ತು.

ಜಿಲ್ಲೆಯ ನೀರಸಂಕಟದ ಮುಖ್ಯ ಕಾರಣಗಳಲ್ಲೊಂದು ಪ್ರಕೃತಿ ಮತ್ತು ಪೂರ್ವಜರು ಮಾಡಿಕೊಟ್ಟ ಅದ್ಭುತ ಜಲನಿಧಿಗಳನ್ನು ಉಪೇಕ್ಷಿಸಿರುವುದು. ಸಾಮೂಹಿಕವಾಗಿ ಜಲಮಟ್ಟ ಏರಿಸುವ ಕಾರ್ಯಕ್ರಮಗಳಲ್ಲಿ ಪಾರಂಜವ್ಯಗಳ ಪುನರುಜ್ಜೀವನಕ್ಕೆ ಅತಿ ಆದ್ಯತೆ ಸಲ್ಲಬೇಕಾಗಿದೆ. ಸರಕಾರಕ್ಕಾಗಿಯೇ ಕಾಯುವುದನ್ನು ಬಿಟ್ಟು, ಊರವರು ಈ ದಾರಿಯಲ್ಲಿ ಒಂದಷ್ಟಾದರೂ ಕೆಲಸ ಮಾಡಲು ಸಾಧ್ಯವಿದೆ.

ಈ ನಡುವೆ 'ಹೂಳು ತುಂಬಿದ ಮದಗವನ್ನು ಹತ್ತು ವರ್ಷದ ಲೀಸಿಗೆ ಕೊಡಿ; ನಾವು ಹೂಳೆತ್ತಿ ಮೀನುಸಾಕಣೆ ಮಾಡಿ ನಂತರ ಹಾಗೆಯೇ ಬಿಟ್ಟುಕೊಡುತ್ತೇವೆ' ಎಂಬ ಅರ್ಜಿಯೊಂದು ತಮ್ಮಲ್ಲಿಗೆ ಬಂದಿದೆ ಎನ್ನುತ್ತಾರೆ ಯಡ್ತಾಡಿ ಪಂಚಾಯತ್ ಅಧ್ಯಕ್ಷ ಪ್ರಕಾಶ್ ಶೆಟ್ಟಿ. ಜಿಲ್ಲಾ ಪಂಚಾಯತಿನಿಂದ 'ಹೀಗೆ ಕೊಡಬಹುದು' ಎಂಬ ಅನುಮತಿ ಕೊಟ್ಟರೆ ತಾವು ಇಂಥ ಪ್ರಸ್ತಾವವನ್ನು ಪರಿಗಣಿಸಲು ಅನುಕೂಲ ಎನ್ನುತ್ತಾರೆ ಅವರು. ಸರಕಾರ ಪೂರ್ತಿ ಅವಗಣಿಸಿ ಕುಳಿತಿರುವಾಗ, ಈ ರೀತಿಯ 'ಅಭಿವೃದ್ಧಿಗೊಳಿಸಿ ಹಿಂದಿರುಗಿಸುವ' ಖಾಸಗಿಯವರ ಪ್ರಸ್ತಾವ ಸ್ವೀಕಾರಾರ್ಹವೇನೋ?

ಮೊತ್ತಮೊದಲು ಎಲ್ಲಾ ಪಂಚಾಯತುಗಳೂ ಚಿಕ್ಕ, ದೊಡ್ಡ ಮದಗಗಳ ಪಟ್ಟಿ ತಯಾರು ಮಾಡಬೇಕಿದೆ. ಈ ಕೆಲಸಕ್ಕೆ ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿಯ ಮಾರ್ಗದರ್ಶನ–ನೆರವು ಪಡೆಯಬಹುದು. ಪಟ್ಟಿ ತಯಾರಾದ ಮೇಲೆ ಜಿಲ್ಲಾ ಆಡಳಿತ ಇಂತಹ ಜಲನಿಧಿಗಳಲ್ಲಾದ ಅತಿಕ್ರಮಣ ತೆರವುಗೊಳಿಸಿ ಅವನ್ನು 'ಸಾರ್ವಜನಿಕ ಉದ್ದೇಶಕ್ಕೆ' ಕಾದಿರಿಸಬೇಕು.



ಮಹೇಶ್

'ಬಹಳ ಹಿಂದೆ ಓದಿದ ನೆನಪಿನ ಪ್ರಕಾರ, ಬ್ರಿಟಿಷ್ ಕಾಲದ ಸರ್ವೆಯ ಪ್ರಕಾರ ಚಾಂತಾರು ಮದಕ 270 ಎಕರೆ ಇತ್ತು. ನನಗೀಗ 80 ವರ್ಷ. ನಾನು ಹುಡುಗನಾಗಿ ಓಡಾಡುತ್ತಿದ್ದಾಗ ಅದರ ಅಂಚು ಈಗಿನ ಬ್ರಹ್ಮಾವರ ಪ್ರಾದೇಶಿಕ ಕೃಷಿ ಸಂಶೋಧನಾ ಕೇಂದ್ರದ ಆವರಣವನ್ನು ಸ್ಪರ್ಶಿಸುತ್ತಿತ್ತು. ಈಗ ಮದಗದ ಗಡಿ ಎಷ್ಟು ಹಿಂದೆ ಸರಿದಿದೆ ಎಂದು ಯಾರೂ ನೋಡಿ ತಿಳಿದುಕೊಳ್ಳಬಹುದು' ಎಂದು ಬೊಟ್ಟು ಮಾಡುತ್ತಾರೆ ಬಿ.ಸೀತಾರಾಮ ಶೆಟ್ಟಿ.

ಚಾಂತಾರು ಮದಕದಲ್ಲೀಗ ಮೂರು ಬೃಹತ್ ಬಾವಿಗಳಿದ್ದು ಒಟ್ಟು ಐದು ಗ್ರಾಮಗಳ ಭಾಗಕ್ಕೆ ಕುಡಿನೀರು ಸರಬರಾಜು ಆಗುತ್ತಿದೆ. ಒಟ್ಟು ನಾಲ್ಕು ಪಂಪುಗಳು ಸೇರಿ ದಿನದ ಹನ್ನೆರಡು ಗಂಟೆ ಕಾಲ ಒಂದು ಅಡಿ ವ್ಯಾಸದ ಪೈಪಿನಲ್ಲಿ ನೀರು ಸರಬರಾಜು ಮಾಡುತ್ತಿವೆ ಎನ್ನುತ್ತಾರೆ ಸ್ಥಳೀಯರು.

### ಮದಕಪ್ರಧಾನ ಪಂಚಾಯತಿಗಳು

'ಅರ್ಧ ಎಕರೆ ವಿಸ್ತೀರ್ಣದ್ದರಿಂದ ಆರಂಭಿಸಿ ಲೆಕ್ಕ ಹಾಕಿದರೆ ನಮ್ಮ ಹೆಗ್ಗುಂಜೆ ಪಂಚಾಯತಿನಲ್ಲಿ 50ಕ್ಕೂ ಮಿಕ್ಕಿ ಮದಗಗಳಿದ್ದಾವು' ಎನ್ನುತ್ತಾರೆ ಅಲ್ಲಿನ ಪಂಚಾಯತ್ ಅಧ್ಯಕ್ಷ ಗಣೇಶ್ ಶೆಟ್ಟಿ. 'ಆವರ್ಸೆಯ ಮೂರು ಗ್ರಾಮಗಳಲ್ಲಿ ಕನಿಷ್ಠ 15 ಬರೇ ಚಿಕ್ಕದಲ್ಲದ ಮದಗಗಳೇ ಇವೆ. ಅದರಲ್ಲಿ ರಾಯರಕೆರೆ ಮದಗ ಮಾತ್ರ ತಕ್ಕ ಮಟ್ಟಿಗೆ ಸುಸ್ಥಿತಿಯಲ್ಲಿದೆ. ಕಿರಾಡಿ ದೊಡ್ಮನೆಯ ಒಂದೂವರೆ ಎಕರೆಯ ಮದಕ ಪೂರ್ತಿ ಮುಚ್ಚಿದೆ. ಉಳಿದವೂ ಅವನತಿಯ ವಿವಿಧ ಘಟ್ಟಗಳಲ್ಲಿವೆ' ಎಂದು ವಿಷಾದಿಸುತ್ತಾರೆ ಆವರ್ಸೆ ಪಂಚಾಯತ್ ಸದಸ್ಯ ವಿಜಯ್ ಶೆಟ್ಟಿ.

ಹಾಗೆ ನೋಡಿದರೆ ಆವರ್ಸೆ, ಹೆಗ್ಗುಂಜೆಗಳಲ್ಲದೆ ಯಡ್ತಾಡಿ, ಕಾಡೂರು–ನೆಡೂರು, ಬಿಲ್ಲಾಡಿ, ಕೆದೂರು, ಬೇಳೂರು, ಶಿರಿಯಾರ – ಇವೆಲ್ಲವೂ ಉಡುಪಿ ಜಿಲ್ಲೆಯ ಮದಗಪ್ರಧಾನ ಪಂಚಾಯತುಗಳ ಕೆಲವು ಉದಾಹರಣೆಗಳು ಮಾತ್ರ.

ಯಡ್ತಾಡಿ ಪಂಚಾಯತಿಯ ಬಾರ್ಕೂರು ರೈಲ್ವೇ ನಿಲ್ದಾಣದ ಬಳಿಯ ಮಸ್ಕಿಬೈಲು ಮದಗ (12 ಎಕರೆ, ಸುಮಾರು 50 ಎಕರೆಯ ಮಳೆನೀರು ಬರುತ್ತಿದೆ), ಆವರ್ಸೆ ಪಂಚಾಯತಿನ ರಾಯರಕೆರೆ ಮದಗ (4 ಎಕರೆ), ಬೇಳೂರು ಗ್ರಾಮದ ಬಡಾಬೆಟ್ಟು ಮದಗ (10 ಎಕರೆ), ಕೆದೂರು ಪಂಚಾಯತಿನ ಶಾನಾಡಿ ಮದಗ (10 ಎಕರೆ) ಮತ್ತು ಕೆಂಜೂರು ಗ್ರಾಮದ ಶಾಂತಿಕೆರೆ ಮದಗ (5 ಎಕರೆ) ಈಚೆಗೆ ಅಲ್ಪಸ್ವಲ್ಪ ಹೂಳೆತ್ತಿದ ಕಾರಣ ಕೊನೆಯವರೆಗೂ ನೀರುಳಿಸಿಕೊಳ್ಳುವ ಮದಗಗಳು. ಇವು ಸುತ್ತಲಿನ ಅನೇಕ ಕುಟುಂಬಗಳ ನೀರನಿಶ್ಚಿಂತೆಗೆ ಕಾರಣವಾಗಿವೆ.

### ಬಹುತೇಕ ನಿಸರ್ಗನಿರ್ಮಿತ

ಮದಕ ಕರಾವಳಿ ಕರ್ನಾಟಕದ ಜಂಬಿಟ್ಟಿಗೆ